## 17. ಮನೆಯಲ್ಲೇ ಕೂತು ಕೋರ್ಟ್‌ಗೆ ಹಾಜರಾಗಿ

ಕೊರೋನಾ ವ್ಯಾಪಿಸುವುದನ್ನು ತಡೆಯಲು ಲಾಕ್‌ಡೌನ್ ಘೋಷಿಸಿದ ಪರಿಣಾಮ ಕೋರ್ಟ್‌ಗಳ ಕಾರ್ಯನಿರ್ವಹಣೆ ಸ್ಥಗಿತಗೊಂಡು ನ್ಯಾಯದಾನದಿಂದ ವಿಳಂಬವಾಗಿ ಕಕ್ಷಿದಾರರಿಗೆ ಸಾಕಷ್ಟು ಅನಾನುಕೂಲತೆ ಆಗುತ್ತಿರುವ ಹಿನ್ನೆಲೆಯಲ್ಲಿ ಹೈಕೋರ್ಟ್ ಈಗ ಮೋಟಾರು ವಾಹನ ಕಾಯ್ದೆಯಡಿಯ ಪ್ರಕರಣಗಳಿಗೆ ವರ್ಚುಯಲ್ ಕೋರ್ಟ್ ಆರಂಭಿಸಲು ಸಜ್ಜಾಗಿದೆ. ಇದರಿಂದ ಮನೆಯಲ್ಲೇ ಕುಳಿತು ಅಥವಾ ಇರುವ ಸ್ಥಳದಿಂದ ಆನ್‌ಲೈನ್ ಮೂಲಕವೇ ಕೋರ್ಟ್‌ಗೆ ಹಾಜರಾಗಬಹುದು. ಕೋರ್ಟ್ ಕಲಾಪ ನಡೆಸುವುದು, ಅರ್ಜಿಗಳು ಸಲ್ಲಿಸುವ ವಿಚಾರದಲ್ಲಿ ಸಾಕಷ್ಟು ಡಿಜಿಟಲ್ ವಿಧಾನಗಳನ್ನು ಹೈಕೋರ್ಟ್ ಜಾರಿ ಮಾಡಿದೆ. ಲಾಕ್‌ಡೌನ್ ಅವಧಿಯಲ್ಲಿ ವಕೀಲರು ಅರ್ಜಿಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಇ–ಫೈಲಿಂಗ್, ಆನ್‌ಲೈನ್ ಮೂಲಕ ಆದೇಶದ ಸರ್ಟಿಫೈಡ್ ಕಾಪಿಗಳಿಗೆ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಪರಿಚಯಿಸಿತ್ತು. ಪ್ರಸ್ತುತ ವರ್ಚುಯಲ್ ಕೋರ್ಟ್ ಆರಂಭಿಸಲು ಸಿದ್ಧತೆ ನಡೆಸಿದೆ. ಅತಿ ಶೀಘ್ರವೇ ಈ ವರ್ಚುಯಲ್ ಕೋರ್ಟ್ ಆರಂಭವಾಗಲಿದ್ದು, ಇದು ನ್ಯಾಯಾಂಗ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದೆ ಎಂದು ವಕೀಲರು ವ್ಯಾಖ್ಯಾನಿಸುತ್ತಿದ್ದಾರೆ.

ಮೋಟಾರು ವಾಹನ ಕಾಯ್ದೆಯಡಿ ದಾಖಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಬೆಂಗಳೂರು ನಗರಕ್ಕೆ ಸೀಮಿತವಾಗಿ ವರ್ಚ್ಯುವಲ್ ಕೋರ್ಟ್ ಆರಂಭಿಸಲಾಗುತ್ತಿದೆ. ಸಂಚಾರ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಸಾಕಷ್ಟು ಸಾರ್ವಜನಿಕರಿಗೆ ದಂಡ ಪಾವತಿಯ ಶುಲ್ಕದ ರಸೀದಿ ಮನೆಗೆ ಹೋಗುತ್ತದೆ. ಸದ್ಯದ ವ್ಯವಸ್ಥೆಯಲ್ಲಿ ರಸೀದಿ ಪಡೆದವರು ಸಂಬಂಧಪಟ್ಟ ಕ್ರಿಮಿನಲ್ ಕೋರ್ಟ್‌ಗೆ ತೆರಳಿ ವಿಚಾರಣೆಗೆ ಹಾಜರಾಗಬೇಕು. ಕೆಲ ಸಂದರ್ಭದಲ್ಲಿ ಇದು ಶಿಕ್ಷಾರ್ಹ ಅಪರಾಧವೂ ಆಗಿರುತ್ತದೆ. ನ್ಯಾಯಾಲಯಕ್ಕೆ ಹೋಗುವುದರಿಂದ ಸಾರ್ವಜನಿಕರ ಇಡೀ ದಿನ ವ್ಯರ್ಥವಾಗುತ್ತದೆ. ಆದರೆ, ವರ್ಚುವಲ್ ಕೋರ್ಟ್ ಆರಂಭವಾದರೆ ಸಾರ್ವಜನಿಕರು ಕ್ರಿಮಿನಲ್ ಕೋರ್ಟ್‌ನ ನ್ಯಾಯಾಧೀಶರ ಮುಂದೆ ಆನ್‌ಲೈನ್ ಮೂಲಕವೇ ಹಾಜರಾಗಬಹುದು. ನಂತರ ಅವರು ತಪ್ಪು ಒಪ್ಪಿಕೊಂಡಿರೆ ಆ ಕ್ಷಣವೇ ನ್ಯಾಯಾಧೀಶರು ತೀರ್ಮಾನ ಕೈಗೊಳ್ಳುತ್ತಾರೆ. ದಂಡ ವಿಧಿಸಿದರೆ ಆನ್‌ಲೈನ್ ಮೂಲಕವೇ ದಂಡ ಪಾವತಿ ಮಾಡಬಹುದು. ಆಗ ಇಡೀ ಪ್ರಕರಣವೇ ಮುಕ್ತಾಯ ಕಾಣುತ್ತದೆ. ಇದರಿಂದ ಸಾರ್ವಜನಿಕರು ಕ್ರಿಮಿನಲ್ ಕೋರ್ಟ್‌ಗಳಿಗೆ ಹಾಜರಾಗುವುದು ಹಾಗೂ ಸಮಯ ವ್ಯರ್ಥ ಮಾಡುವುದು ತಪ್ಪುತ್ತದೆ.

**ಯಶಸ್ವಿಯಾದರೆ ಇತರ ಕಡೆಗೂ ವಿಸ್ತರಣೆ:–** ವರ್ಚುಯಲ್ ಕೋರ್ಟ್‌ಗಳು ಆರಂಭವಾದರೆ ಸಾರ್ವಜನಿಕರು ತಮ್ಮ ಕಚೇರಿ ಹಾಗೂ ಮನೆಯಲ್ಲಿ ಕುಳಿತು ಆನ್‌ಲೈನ್ ಮೂಲಕ ಕೋರ್ಟ್‌ಗೆ ಹಾಜರಾಗುವುದಕ್ಕೆ ಸಾಧ್ಯವಾಗುತ್ತದೆ. ಈ ವ್ಯವಸ್ಥೆ ಯಶಸ್ವಿಯಾದರೆ ಬೇರೆ ನ್ಯಾಯಾಲಯಗಳು ಹಾಗೂ ಜಿಲ್ಲೆಗಳಿಗೆ ವರ್ಚುಯಲ್ ಕೋರ್ಟ್ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತದೆ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ಅವರು ವಕೀಲರೊಂದಿಗೆ ನಡೆಸಿದ ಸಂವಾದದಲ್ಲಿ ತಿಳಿಸಿರುತ್ತಾರೆ

ಆಧಾರ:ಕನ್ನಡ ಪ್ರಭ, ದಿನಾಂಕ: 01.06.2020